ಅ) ಶಿವಮೊಗ್ಗ ತಾಲ್ಲೂಕು, ಗಾಡಿಕೊಪ್ಪ ಪ್ರದೇಶದಲ್ಲಿರುವ ಸರ್ಕಾರಿ ಪ್ರೌಢ ಶಾಲೆಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಜಿಲ್ಲಾ ಉಪ ನಿರ್ದೇಶಕರಿಂದ ಪ್ರಸ್ತಾವನೆ ಬಂದಿದೆ. ಪ್ರಸ್ತುತ ಸಾಲಿನಲ್ಲಿ ಆಯವ್ಯಯದಲ್ಲಿ ಅವಕಾಶ ಇಲ್ಲದಿರುವುದರಿಂದ ಹೊಸದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಉದ್ದೇಶವಿರುವುದಿಲ್ಲ.

ಶಿವಮೊಗ್ಗ ನಗರ ಕೊಳಚೆ ಪ್ರದೇಶಗಳ ಅಭಿವೃದ್ಧಿ

2004(1706) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2001-02ನೇ ಸಾಲಿನಲ್ಲಿ ಶಿವಮೊಗ್ಗ ನಗರ ಕೊಳಚೆ ಪ್ರದೇಶ ನಿವಾಸಿಗಳ ಅನುಕೂಲಕ್ಕಾಗಿ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ವಾಲ್ಮೀಕಿ ಅಂಬೇಡ್ಕರ್ ಯೋಜನೆಯಲ್ಲಿ ಎಷ್ಟು ಮನೆಗಳು ಮಂಜೂರಾಗಿರುತ್ತವೆ; ಎಷ್ಟು ಹಣ ಮಂಜೂರಾಗಿರುತ್ತದೆ; ಎಷ್ಟು ಮನೆಗಳು ಪೂರ್ಣಗೊಂಡಿರುತ್ತವೆ; (ವಿವರ ನೀಡುವುದು) ;

ಆ) ನಿರ್ಮಲಜ್ಯೋತಿ ಯೋಜನೆಯಡಿಯಲ್ಲಿ 2001-02ರಲ್ಲಿ ಎಷ್ಟು ಮೊತ್ತದ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳು ಮಂಜೂರಾಗಿರುತ್ತದೆ; ಯಾವ ಹಂತದಲ್ಲಿರುತ್ತದೆ;

ಇ) 2002-03 ಈ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳು ಮಂಜೂರಾಗಿರುತ್ತದೆ; ಕಾಮಗಾರಿಗಳ ಮೊತ್ತವೆಷ್ಟು (ವಿವರ ನೀಡುವುದು)?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):

ಅ) ಶಿವಮೊಗ್ಗ ನಗರದ ಕೊಳಚೆ ಪ್ರದೇಶ ನಿವಾಸಿಗಳ ಅನುಕೂಲಕ್ಕಾಗಿ 2001-2002ನೇ ಸಾಲಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿಯಲ್ಲಿ 187 ಮನೆಗಳನ್ನು ನಿರ್ಮಿಸಲು ಮಂಜೂರಾತಿ ದೊರೆತಿದ್ದು, ವಿವರ ಕೆಳಗಿನಂತಿದೆ.

ಕೊಳಚೆ ಪ್ರದೇಶದ ಹೆಸರು	ಮಂಜೂರಾದ ಮನೆಗಳು	ಮಂಜೂರಾದ ಹಣ (ಲಕ್ಷ ರೂ)	ಪೂರ್ಣಗೊಂಡ ಮನೆಗಳು
1. ಅಂಬೇಡ್ಕರ್ ನಗರ	24	9.60	24
2. ನ್ಯೂಬೋವಿ ಕಾಲೋನಿ	50	20.00	50
3. ಟಿಪ್ಪುನಗರ ಕೆರೆ ಅಂಗಳ	113	45.20	113
ಒಟ್ಟು	**187**	**74.80**	**187**

ಆ) ಶಿವಮೊಗ್ಗ ನಗರದಲ್ಲಿ ನಿರ್ಮಲಜ್ಯೋತಿ ಯೋಜನೆಯನ್ನು 2001-02ರಲ್ಲಿ ಜಾರಿಗೆ ತಂದಿಲ್ಲ. ಆದರೆ 2002-03ನೇ ಸಾಲಿನಲ್ಲಿ ನಿರ್ಮಲಜ್ಯೋತಿ ಯೋಜನೆ ಜಾರಿಗೆ ತರಲು ಟೆಂಡರ್ ಕರೆಯಲಾಗಿದ್ದು, ಸದ್ಯದಲ್ಲಿಯೇ ಗುತ್ತಿಗೆದಾರರನ್ನು ನೇಮಿಸಿ ಶಿವಮೊಗ್ಗ ನಗರದ 9 ಕೊಳಚೆ ಪ್ರದೇಶಗಳಲ್ಲಿ ರಸ್ತೆ, ಒಳಚರಂಡಿ, ಆಡ್ಡಮೋರಿ, ಕುಡಿಯುವ ನೀರು, ಹೊರ ವಿದ್ಯುದೀಕರಣ, ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ) 2002-2003 ರಲ್ಲಿ ನಿರ್ಮಲಜ್ಯೋತಿ ಯೋಜನೆಯಡಿ ಶಿವಮೊಗ್ಗ ನಗರದ 9 ಕೊಳಚೆ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು ರೂ. 196.32 ಲಕ್ಷ ಮಂಜೂರಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.

ಕೊಳಚೆ ಪ್ರದೇಶದ ಹೆಸರು	ಕಾಮಗಾರಿಗಳ ವಿವರ	ನಿಗಧಿಪಡಿಸದ ಒಟ್ಟು ಹಣ ರೂ. ಲಕ್ಷಗಳಲ್ಲಿ
1	2	3
1. ಅಂಬೇಡ್ಕರ್ ನಗರ	ರಸ್ತೆ, ಚರಂಡಿ, ಅಡ್ಡಮೋರಿ, ಕುಡಿಯುವ ನೀರು, ಹೊರವಿದ್ಯುದೀಕರಣ	24.39
2. ಕಾಶಿಪುರ ತಮಿಳು ಕಾಲೋನಿ	ರಸ್ತೆ, ಚರಂಡಿ, ಅಡ್ಡಮೋರಿ, ಕುಡಿಯುವ ನೀರು, ಹೊರವಿದ್ಯುದೀಕರಣ	15.40
3. ಹುಚ್ಚರಾಯ ಕಾಲೋನಿ	ರಸ್ತೆ, ಚರಂಡಿ, ಅಡ್ಡಮೋರಿ, ಕುಡಿಯುವ ನೀರು, ಹೊರವಿದ್ಯುದೀಕರಣ	10.66
4. ಟಿಪ್ಪುನಗರ ಕೆರೆ ಅಂಗಳ	ರಸ್ತೆ, ಚರಂಡಿ, ಅಡ್ಡಮೋರಿ, ಕುಡಿಯುವ ನೀರು, ಹೊರವಿದ್ಯುದೀಕರಣ	41.06
5. ವೆಂಕಟೇಶ ನಗರ	ರಸ್ತೆ, ಚರಂಡಿ, ಅಡ್ಡಮೋರಿ, ಕುಡಿಯುವ ನೀರು, ಹೊರವಿದ್ಯುದೀಕರಣ	9.54
6. ರಾಜೀವ ಗಾಂಧಿ ನಗರ	ರಸ್ತೆ, ಚರಂಡಿ, ಅಡ್ಡಮೋರಿ, ಕುಡಿಯುವ ನೀರು, ತಡೆಗೋಡೆ, ಹೊರವಿದ್ಯುದೀಕರಣ	23.61
7. ಇಂದಿರಾ ಗಾಂಧಿ ನಗರ	ರಸ್ತೆ, ಚರಂಡಿ, ಅಡ್ಡಮೋರಿ, ಕುಡಿಯುವ ನೀರು, ಹೊರವಿದ್ಯುದೀಕರಣ	27.45
8. ವಿದ್ಯಾನಗರ	ರಸ್ತೆ, ಚರಂಡಿ, ಅಡ್ಡಮೋರಿ, ಕುಡಿಯುವ ನೀರು, ಒಳಚರಂಡಿ ಹೊರವಿದ್ಯುದೀಕರಣ	23.25
9. ನ್ಯೂಬೋವಿ ಕಾಲೋನಿ	ರಸ್ತೆ, ಚರಂಡಿ, ಅಡ್ಡಮೋರಿ, ಹೊರವಿದ್ಯುದೀಕರಣ	20.96
ಒಟ್ಟು		**196.32**